**ಓಎಸ್.ನಂ. 1650/2022** **ಪಿ ಡಬ್ಲ್ಯೂ 2**

**ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ –**

ನಾನು ಈ ದಾವೆಯಲ್ಲಿ ವಾದಿಯ ಪರ ಸಾಕ್ಷಿಯಗಿದ್ದು, ನನ್ನ ಮುಖ್ಯ ವಿಚಾರಣೆಗಾಗಿ ನಾನು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಅವುಗಳಲ್ಲಿರುವ ವಿಷಯ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಸಾಕ್ಷಿಗೆ ನಿಪಿ–1ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಈಗಾಗಲೇ ನಿಪಿ–1(ಬಿ) ಎಂದು ಗುರುತಿಸಲಾಗಿರುತ್ತದೆ. ಸದರಿ ಸಹಿಯನ್ನು 2021ರಲ್ಲಿ ಶಿವಣ್ಣರವರು ಚಿಕ್ಕದೇವನಾಯಕರವರ ಬಳಿ ಹಣ ಪಡೆದುಕೊಂಡು ನಂತರದಲ್ಲಿ ಸದರಿ ದಾಖಲೆಗೆ ನಾನು ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲೂ ಯಾವುದೇ ಸಕಾರಣಗಳು ಇಲ್ಲದೇ ಇದ್ದಕಾರಣ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಸಾ.ಹೇ.ಬೆ. ಮಾಡಲಾಯಿತು. )

**ಓ ಹೇ ಕೇ ಸರಿ ಇದೆ.**

**3 ನೇ ಅಪರ ಸಿವಿಲ್ ನ್ಯಾಯಾಧೀಶರು,**
**ಮೈಸೂರು.**